232(114) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ)

ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರು ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮೈಸೂರು ನಗರದ ನ್ಯಾಯಬೆಲೆ ಅಂಗಡಿಗಳು ಎಷ್ಟು (ವಿವರ ನೀಡುವುದು)

ಆ) ಈ ನ್ಯಾಯಬೆಲೆ ಎಪಿಎಲ್ ಹಾಗೂ ಅಂತ್ಯೋದಯ ಕಾರ್ಡುದಾರರೆಷ್ಟು (ವಿವರ ನೀಡುವುದು)

ಇ) ಜನಸಂಖ್ಯೆಗನುಗುಣವಾಗಿ ನ್ಯಾಯಬೆಲೆ ಅಂಗಡಿಗಳ ಅವಶ್ಯಕತೆ ಇದೆಯೆ,

ಈ) ಹೊಸ ನ್ಯಾಯಬೆಲೆ ಅಂಗಡಿಯ ಮಂಜೂರಾತಿಗಾಗಿ ಸರ್ಕಾರದ ಕ್ರಮವೇನು?

ಶ್ರೀ ಗೋವಿಂದ ಎಂ ಕಾರ್ಜೋಳ

ಅ) ಮೈಸೂರು ನಗರದಲ್ಲಿ 268 ನ್ಯಾಯಬೆಲೆ ಅಂಗಡಿಗಳು ಇರುತ್ತವೆ

ಆ) ಈ ನ್ಯಾಯಬೆಲೆ ಅಂಗಡಿಗಳಲ್ಲಿ 98,017 ಅಕ್ಷಯ,1 10 284 ಎಪಿಎಲ್, 2 11 410 ಪಡಿತರ ಚೀಟಿಗಳು ಇರುತ್ತವೆ

ಇ) ಕರ್ನಾಟಕ ಅಗತ್ಯ ವಸ್ತುಗಳ (ಸಾರ್ವಜನಿಕ ವಿತರಣಾ ಪದ್ಧತಿ) ನಿಯಂತ್ರಣ ಆದೇಶ, 1992ರಲ್ಲಿ ಪಡಿತರ ಚೀಟಿಗಳ ಸಂಖ್ಯೆಗೆ ಅನುಗುಣವಾಗಿನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಅವಕಾಶ ಇರುತ್ತದೆ ಜನಸಂಖ್ಯೆಯ ಅನುಗುಣವಾಗಿ ತೆರೆಯಲು ಅವಕಾಶವಿರುವುದಿಲ್ಲ

ಈ) ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ಪದ್ಧತಿ(ನಿಯಂತ್ರಣ) ಆದೇಶ 1992 ರಡಿ ಹೊಸ ನ್ಯಾಯಬೆಲೆ ಅಂಗಡಿಗಳ ಮಂಜೂರಾತಿಗೆ ಅವಕಾಶ ಇರುತ್ತದೆ ಸದರಿ ನಿಯಮಗಳ ಪ್ರಕಾರ ಹೊಸ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡುವ ಪ್ರಕ್ರಿಯೆ ನಡೆಯುತ್ತಿದೆ

233 (360) ಶ್ರೀ ಶಿವರಾಮು ಬಿ (ಗಂಡಸಿ)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಹಾಸನ ಜಿಲ್ಲೆಯ ಹೇಮಾವತಿ ಸಕ್ಕರೆ ಕಾರ್ಖಾನೆ ನಷ್ಟದಲ್ಲಿದೆಯೇ? ಈಗ ಎಷ್ಟು ನಷ್ಟದಲ್ಲಿರುತ್ತದೆ?

ಆ) ನಷ್ಟ ಹೊಂದಲು ಕಾರಣಗಳೇನು?

ಇ) ಹಿಂದಿನ 3 ವರ್ಷದಲ್ಲಿ ಕಬ್ಬು ಅರೆಯಲು ಹೊಂದಿದ್ದ ಸಾಮರ್ಥ್ಯ, ಪ್ರಗತಿ, ಲಾಭ ಮತ್ತು ನಷ್ಟದ ಮಾಹಿತಿಯನ್ನು ವರ್ಷವಾರು ಒದಗಿಸುವುದು?

ಈ) ಸುಧಾರಣೆಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಜಿ ಟಿ ದೇವೇಗೌಡ

ಅ) ಕಾರ್ಖಾನೆಯು ಈ ಕೆಳಕಂಡ ಕಾರಣಗಳಿಂದ ನಷ್ಟ ಹೊಂದಿರುತ್ತದೆ

1 2001–02 ಮತ್ತು 2002–03 ನೇ ಸಾಲಿನಲ್ಲಿ ಸಕ್ಕರೆ ಮತ್ತು ಕಾಕಂಬಿಯ ಮಾರಾಟ ಬೆಲೆಗಳು ಗಣನೀಯವಾಗಿ ಇಳಿಕೆಯಾಗಿರುವುದು

2 ಸಕ್ಕರೆ ಉತ್ಪಾದನಾ ವೆಚ್ಚವು ಸಕ್ಕರೆ ದರಕ್ಕಿಂತ ಹೆಚ್ಚಾಗಿರುವುದು